ಶ್ರೀ ನಾರಾಯಣಸ್ವಾಮಿ ಎಸ್.ಎನ್.:– ಬೋರ್‌ವೆಲ್‌ಗಳಲ್ಲಿ ನೀರೇ ಇಲ್ಲದಂತಾಗಿದೆ.

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಇದು ಬಹಳ ದೊಡ್ಡ ಗಂಭೀರವಾಗಿರುವ ಸಮಸ್ಯೆಯಾಗಿದೆ, 2–3 ವರ್ಷಗಳಾದರು ಸರ್ವೀಸ್ ಸಿಕ್ಕಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಇದನ್ನು half an hour discussion ನಲ್ಲಿ ತೆಗೆದುಕೊಳ್ಳೋಣ.

ಅಧ್ಯಕ್ಷರು:– ಹಾಗೆ ಮಾಡೋಣ, ಅನೇಕ ಕಡೆ ಕಳೆದ ಸಾರಿ ಕೊಟ್ಟವುಗಳು ಇನ್ನು ಡ್ರಿಲ್ ಆಗಿಲ್ಲ, ಡ್ರಿಲ್ ಆಗಿರುವುದಕ್ಕೆ ಪವರ್ ಕನೆಕ್ಷನ್ ಕೊಟ್ಟಿಲ್ಲ, ಈ ಸ್ಥಿತಿಯಾಗಿದೆ, ಇದು ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ, ಇಂಧನ ಸಚಿವರು ಬಂದ ಮೇಲೆ ಚರ್ಚೆ ಮಾಡೋಣ.

ಶ್ರೀ ನಾರಾಯಣಸ್ವಾಮಿ ಎಸ್.ಎನ್.:– ಕೋಲಾರ ಜಿಲ್ಲೆಯಲ್ಲಿ ಕೊಳವೆ ಬಾವಿ ಕೊರೆಯಿಸುವುದಕ್ಕೆ ನಿರ್ಬಂಧ ಮಾಡಿದ್ದೇವೆಂದು ಉತ್ತರ ಕೊಡುತ್ತಾರೆ, ಆದರೆ ನಮ್ಮ ಜಿಲ್ಲೆಯಲ್ಲಿ ರೈತರು ಕನಿಷ್ಠ 50–100 ಬೋರ್ ವೆಲ್‌ಗಳನ್ನು ಕೊರೆಯಿಸುತ್ತಾರೆ. ಅದರಲ್ಲೂ ಬಡವರು, ಅಲ್ಪಸಂಖ್ಯಾತರು, ಹರಿಜನರು ಹಾಕುವ ಬೋರ್ ವೆಲ್‌ಗಳಿಗೆ ನಿರ್ಬಂಧ ಏತಕ್ಕೆ ಹಾಕಬೇಕು.?

ಅಧ್ಯಕ್ಷರು:– ನಿಮ್ಮ ಒಬ್ಬರದೇ ಅಲ್ಲ, ಬಹಳ ಜನರ ಸಮಸ್ಯೆ ಇದೆ, ಅವರು ಬರಲಿ ಚರ್ಚೆ ಮಾಡೋಣ. ಇನ್ನು ರಾಜೀವ್ ಪಿ. ಅವರ ಪ್ರಶ್ನೆಗೆ ಉತ್ತರ ಬಂದಿಲ್ಲ, ಮುಂದಕ್ಕೆ ಹಾಕಲಾಗಿದೆ.

ಸ್ವಾಯತ್ತ ವಿಶ್ವವಿದ್ಯಾಲಯಗಳು

56(299); ಶ್ರೀ ರಮೇಶ್ ಕುಮಾರ್ ಕೆ.ಆರ್.

ಅ) ರಾಜ್ಯದಲ್ಲಿರುವ ಒಟ್ಟು ವೈದ್ಯಕೀಯ ಸ್ವಾಯತ್ತ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು; ಆ ರೀತಿ ಮಾನ್ಯತೆ ಕೊಡಲು ಬೇಕಾಗಿರುವ ಆಧಾರಗಳೇನು;

ಆ) ರಾಜ್ಯದಲ್ಲಿರುವ ಸ್ವಾಯತ್ತ ವಿಶ್ವವಿದ್ಯಾಲಯಗಳು ಯಾವ ದಿನಾಂಕದಿಂದ ಅಸ್ತಿತ್ವದಲ್ಲಿವೆ;

ಇ) ಸರ್ಕಾರದ ಅಂದಾಜಿನ ಪ್ರಕಾರ ಒಬ್ಬ ವಿದ್ಯಾರ್ಥಿ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಲು ವೈದ್ಯನಾಗಿ ಹೊರಬರಲು ಸರ್ಕಾರಕ್ಕೆ ಬೀಳುವ ಅಂದಾಜು ವೆಚ್ಚ ಎಷ್ಟು;

ಈ) ಸರ್ಕಾರಿ ವೈದ್ಯಕೀಯ ಕಾಲೇಜುಗಳು ವಿವಿಧ ವಿದ್ಯಾರ್ಥಿಗಳಿಂದ ಪಡೆಯುವ ಕನಿಷ್ಠ ಮತ್ತು ಗರಿಷ್ಠ ಶುಲ್ಕ ಎಷ್ಟು?

ಉ) ಖಾಸಗಿ ವೈದ್ಯಕೀಯ ವಿದ್ಯಾಲಯಗಳಲ್ಲಿ ವಿವಿಧ ವರ್ಗದ ವಿದ್ಯಾರ್ಥಿಗಳು ಕೊಡಬೇಕಾದ ಕನಿಷ್ಠ ಮತ್ತು ಗರಿಷ್ಠ ಶುಲ್ಕ ಎಷ್ಟು?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್

ಅ) ರಾಜ್ಯದಲ್ಲಿ ಒಟ್ಟು 08 ವೈದ್ಯಕೀಯ ಸ್ವಾಯತ್ತ ವಿಶ್ವವಿದ್ಯಾಲಯಗಳು ಇದ್ದು, ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಸ್ವಾಯತ್ತ ವಿಶ್ವವಿದ್ಯಾಲಯ ಸ್ಥಾನಮಾನವನ್ನು ನೀಡಲಾಗುತ್ತದೆ.

ಆ) ರಾಜ್ಯದಲ್ಲಿರುವ ಸ್ವಾಯತ್ತ ವಿಶ್ವವಿದ್ಯಾಲಯಗಳು ಈ ಕೆಳಕಂಡ ವರ್ಷದಿಂದ ಅಸ್ತಿತ್ವದಲ್ಲಿವೆ.

ವಿಶ್ವವಿದ್ಯಾಲಯ	ವರ್ಷ
ಕೆ.ಎಲ್.ಇ. ವಿಶ್ವವಿದ್ಯಾಲಯ, ಬೆಳಗಾಂ	2006
ಜೆ.ಎಸ್.ಎಸ್. ವಿಶ್ವವಿದ್ಯಾಲಯ, ಮೈಸೂರು	2007
ನಿಟ್ಟೆ ವಿಶ್ವವಿದ್ಯಾಲಯ, ಮಂಗಳೂರು	2009
ಮಣಿಪಾಲ್ ವಿಶ್ವವಿದ್ಯಾಲಯ, ಮಣಿಪಾಲ್	1993
ಯನಪೋಯ ವಿಶ್ವವಿದ್ಯಾಲಯ, ಮಂಗಳೂರು	2009
ಬಿ.ಎಲ್.ಡಿ.ಇ. ವಿಶ್ವವಿದ್ಯಾಲಯ, ಬಿಜಾಪುರ	2008
ಶ್ರೀ ದೇವರಾಜ್ ಅರಸ್ ವಿಶ್ವವಿದ್ಯಾಲಯ, ಕೋಲಾರ	2007
ಶ್ರೀ ಸಿದ್ಧಾರ್ಥ ವಿಶ್ವವಿದ್ಯಾಲಯ, ತುಮಕೂರು	2008

ಇ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳು ರಾಜ್ಯದ ವಿವಿಧ ಪ್ರದೇಶಗಳಲ್ಲಿದ್ದು, ಪ್ರತಿ ವೈದ್ಯಕೀಯ ಕಾಲೇಜಿಗೆ ಸರ್ಕಾರದಿಂದ ಭರಿಸಲಾಗುವ ವೆಚ್ಚವು ಸದರಿ ವೈದ್ಯಕೀಯ ಕಾಲೇಜಿನ ಸ್ನಾತಕ / ಸ್ನಾತಕೋತ್ತರ ಪ್ರವೇಶ ಮಿತಿ, ಒಗಿಸಲಾಗಿರುವ ಮೂಲಭೂತ ಸೌಕರ್ಯಗಳು, ಬೋಧಕ / ಬೋಧಕೇತರ ಸಿಬ್ಬಂದಿಗಳು, ವೈದ್ಯಕೀಯ ಉಪಕರಣಗಳು, ಹೊಂದಿಕೊಂಡಿರುವ ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯ, ಚಿಕಿತ್ಸೆಗಾಗಿ ಲಭ್ಯವಿರುವ ಸೌಲಭ್ಯ ಹಾಗೂ ರೋಗಿಗಳ ಸಂಖ್ಯೆಯ ಮೇಲೆ ಆಧಾರಿತವಾಗಿರುತ್ತದೆ.

ಆದರೆ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ರೋಗಿಗಳ ಚಿಕಿತ್ಸೆಗಾಗಿ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆಗುವ ವೆಚ್ಚವು ಸೇರಿರುವುದರಿಂದ ಒಬ್ಬ ವಿದ್ಯಾರ್ಥಿಗೆ ವೈದ್ಯಕೀಯ ವಿದ್ಯಾಭ್ಯಾಸವನ್ನು ಮುಗಿಸಲು ಸರ್ಕಾರಕ್ಕೆ ಬೀಳುವ ಅಂದಾಜು ವೆಚ್ಚವನ್ನು ನಿಖರವಾಗಿ ಲೆಕ್ಕ ಮಾಡಲು ಬರುವುದಿಲ್ಲ.

ಈ) **ಮತ್ತು ಉ**) ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವಿವಿಧ ಕೋರ್ಸುಗಳಿಗೆ ಶುಲ್ಕವನ್ನು ಸರ್ಕಾರದ ಆದೇಶ ಸಂಖ್ಯೆ: ಆಕುಕ 101 ಆರ್‌ಜಿಯು 2012, ದಿ: 10–05–2012 ರಲ್ಲಿ ನಿಗದಿಪಡಿಸಲಾಗಿದ್ದು, ಸದರಿ ಆದೇಶದ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಶ್ರೀ ರಮೇಶ್‌ಕುಮಾರ್ ಕೆ.ಆರ್.:– ಮಾನ್ಯ ಅಧ್ಯಕ್ಷರೆ, ಉತ್ತರ ಈಗ ನನ್ನ ಕೈಗೆ ಬಂದಿದೆ, ಈ University Grants Commission ಮುಂದೆ ಕೆಲವು institutions, ಯಾವುದಕ್ಕೆ deemed universities ಎಂದು ನೀವು ಅವಕಾಶ ಮಾಡಿಕೊಟ್ಟಿದ್ದೀರಿ, ಇವರಿಗೆ infrastructure facilities ಇಲ್ಲವೆಂದು ಹೇಳಿ black list ಮಾಡುವುದರಲ್ಲಿದ್ದರು. ಯಾರು black list ಆಗಬೇಕಾಗಿತ್ತೊ ಅಂಥವರಿಗೆ deemed university status ಅನ್ನು ಕೊಡಿಸಿದ್ದಾರೆ, ಇದು ನಿಜವಾ ಸುಳ್ಳಾ?

ಅಧ್ಯಕ್ಷರು:– ಯಾರ್ಯಾರದು ಇದ್ದಾವೆ ಎನ್ನುವುದನ್ನು ನೋಡಿದ್ದೀರಾ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇವು ಹಿಂದೆ ಆಗಿರುವುದು, ಆದರೆ ರಾಜ್ಯ ಸರ್ಕಾರದಲ್ಲಿ NOC ಕೆಲವೊಂದು deemed university ಗೆ ಮಾತ್ರ ಕೊಟ್ಟಿದ್ದಾರೆ, ಕೆಲವೊಂದು deemed university ಗೆ ನಾವು NOCಯನ್ನೂ ಕೊಟ್ಟಿಲ್ಲ. In fact ಇವರಿಗೆ ಕೊಡಬಾರದೆಂದು ನಮ್ಮ ರಾಜ್ಯದಿಂದ ಬರೆದಿದ್ದಾರೆ ಆದರೂ ಕೂಡ ಯುಜಿಸಿ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರ ಕೊಟ್ಟಿದ್ದಾರೆ, ಇದರಲ್ಲಿ ರಾಜ್ಯದ ಪಾತ್ರವೇನು ಇಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ನಾನು ಸರಳವಾಗಿ ಕೇಳುತ್ತೇನೆ. ರಾಜ್ಯಸರ್ಕಾರದಿಂದ ನೀವು ಅನುಮತಿ ಕೊಟ್ಟ ಮೇಲೆ ಇಲ್ಲಿ ಮುಖ್ಯಸ್ಥರಾಗಿರತಕ್ಕಂತಹ ರಾಜ್ಯಪಾಲರು ಅದರ ಮೇಲೆ ತಮ್ಮ ಸಹಿಯನ್ನು ಪ್ರಸಾದ ಮಾಡಿ ಈ ಕೆಲವು ಸಂಸ್ಥೆಗಳಿಗೆ Deemed Universities ಎನ್ನತಕ್ಕಂತಹ ಗೌರವವನ್ನು ಕೊಟ್ಟಿದ್ದಾರೆ. ಇವರು ಎಂತಹ ಗೌರವಸ್ಥರು ಎಂದರೆ ಇವರಿಗೆ ಮೂಲಭೂತ ಸೌಕರ್ಯಗಳೇ ಇಲ್ಲ, ಇವರು ಕಾಲೇಜು ನಡೆಸುವುದಕ್ಕೆ ಯೋಗ್ಯರಲ್ಲ ಎಂದು ಅಲ್ಲಿ black list ನಲ್ಲಿದ್ದಾರೆ. ಕೇಂದ್ರ ಸರ್ಕಾರ ಏನು ಬಾಂಗ್ಲಾ ದೇಶದ್ದಾ? Are you not bound by those conditions? ನಾನು ನಿಮ್ಮನ್ನು ಸರಳವಾಗಿ ಕೇಳತಕ್ಕಂಥದ್ದು ಯಾರು black list ಆಗಬೇಕು ಎನ್ನತಕ್ಕಂತಹ ಪಟ್ಟಿಯಲ್ಲಿದ್ದರು, ಅಂತಹ ಸಂಸ್ಥೆಗಳಿಗೆ ಸರ್ಕಾರ ನೀವು Deemed Universities ಆಗುವುದಕ್ಕೆ ಸರ್ಕಾರ, Are you a party for it?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾನು ಯಾವುದೂ ಪಾರ್ಟಿ ಇಲ್ಲ. ನಾವು ಯಾರಿಗೂ ಅಂತಹವರಿಗೆ ರೆಕಮಂಡ್ ಮಾಡಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ನಾನು ತಮಗೆ ಏನು ಹೇಳುತ್ತೇನೆ, ಅನುಭವ ಕಡಿಮೆ ಚಿಕ್ಕ ವಯಸ್ಸು, ಮಂತ್ರಿಗಳಾಗಿದ್ದೀರಿ, ನಿಮ್ಮನ್ನು

encourage ಮಾಡುವುದು ನಮ್ಮ ಕರ್ತವ್ಯ. ಆತುರದಲ್ಲಿ defend ಮಾಡಿಕೊಳ್ಳಬೇಕೆಂದು ಊಟ ಯಾರದೋ ಪಾಯಖಾನ ಯಾರದೋ. ನೀವು ಊಟ ಮಾಡಿದರೆ ತಾವು ಪಾಯಖಾನ ಮಾಡಬೇಕಾಗುತ್ತದೆ. ಇಲ್ಲಿ ಊಟ ಮಾಡಿದವರು ಒಬ್ಬರು, ಪಾಯಖಾನ ಮಾಡಿಕೊಂಡಿರುವವರು ಒಬ್ಬರು. ಊಟ ಮಾಡಿದವರು ಗಂಟು ಮೂಟೆ ಎಲ್ಲ ಕಟ್ಟಿಕೊಂಡು ಹೊರಟ್ಟಿದ್ದಾರೆ. Don't try to reply in a hurry and get yourself trapped. ಆಮೇಲೆ ನಾನು privilegeಗೆ ಹಾಕಬೇಕಾಗುತ್ತದೆ. Please think twice. If you want to take time, please take time. I am not in a hurry. Don't try to answer the question in over enthusiasm and get into further deeper problems.

ಅಧ್ಯಕ್ಷರು:– Government prior consent ಬೇಕೋ ಬೇಡವೊ?

ಶ್ರೀ ಕೆ.ಆರ್. ರಮೇಶ್ ಕುಮಾರ್:– ಇವರಲ್ಲಿಂದ ಎಲ್ಲಾ ರೆಕಮಂಡೇಷನ್ಸ್ ಆಗಿ, ಕಂಡೀಷನ್ಸ್ ಎಲ್ಲಾ fulfill ಆಗಿ Deemed Universities Act ಇದೆಯಲ್ಲ ಅದರಲ್ಲಿ specify ಮಾಡುತ್ತಾರೆ. ಇಂತಿಂತಹ ಸೆಕ್ಷನ್‌ನಲ್ಲಿ ಇದು ಮಾಡಬಹುದು, ಇದು ಮಾಡಬಹುದು, ಇದು ಮಾಡಬಾರದು, ಹೀಗಿರಬೇಕು, ಎಂದು ಇರುತ್ತದೆ. ಇವನ್ನೆಲ್ಲಾ ಪೂರೈಸಿಕೊಂಡು ಇಲ್ಲಿಂದ ಹೋದ ಮೇಲೆ ಇವರು ಅಂಕಿತ ಹಾಕುವುದು. ಆದ್ದರಿಂದ ನಾನೇನು ಕೇಳುತ್ತೇನೆ, ನೀವೂ ಕೂಡ ಇದರಲ್ಲಿ ಭಾಗಸ್ವಾಮಿಗಳಾಗುತ್ತೀರಿ. Deemed Universities Act ನ ಎಲ್ಲಾ conditions/ provisions ಓದಿಕೊಂಡಿದ್ದೀರಾ? ಆ ಎಲ್ಲವನ್ನೂ ಕೂಡ ಇವರು ಪೂರೈಸಿದ್ದಾರೆಯೇ? ಇವರಲ್ಲಿ ಯಾರಾದರೂ black listನಲ್ಲಿ ಇರಬೇಕಾದವರು ಇದ್ದಾರೆಯೇ?

ಅಧ್ಯಕ್ಷರು:– ಇದ್ದಾರೆ ಇಲ್ಲವೆಂದು ಹೇಳಿ ಅಷ್ಟೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– time ತೆಗೆದುಕೊಳ್ಳಿ, ನನಗೇನೂ ಆಕ್ಷೇಪಣೆ ಇಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ನನ್ನ ಹತ್ತಿರ ಇರುವ ದಾಖಲಾತಿ ಪ್ರಕಾರ ನಾನು ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ 8 ಸಂಸ್ಥೆಗಳು ಇವೆ. ಇದರಲ್ಲಿ ಕೆಲವು ಸಂಸ್ಥೆಗಳು. .

ಶ್ರೀ ಕೆ.ಆರ್. ರಮೇಶ್ ಕುಮಾರ್:– ನಾನು 8 ಸಂಸ್ಥೆಗಳು ಇವೆಯೋ, 80 ಸಂಸ್ಥೆಗಳಿವೆಯೋ, ಎರಡು ಇವೆಯೋ ಎಂದು ಕೇಳಲಿಲ್ಲ. ಯಾವ ಸಂಸ್ಥೆಗಳು Deemed Universities status ಪಡೆದುಕೊಂಡಿವೆ, ಇವುಗಳ ಪೈಕಿ ಯಾವುದಾದರೂ UGC ಮುಂದೆ black list ಆಗುವುದಕ್ಕೆ ತಯಾರಾಗಿದ್ದವಾ? ಅದನ್ನು ಗಮನಕ್ಕೆ ತೆಗೆದುಕೊಳ್ಳದೆ black list ಆಗಬೇಕಾದವರಿಗೆ Deemed Universities ಎನ್ನತಕ್ಕಂತಹ status ಕೊಡತಕ್ಕಂತಹ ಪುಣ್ಯದ ಕೆಲಸ ನೀವೇನಾದರೂ ಮಾಡಿದ್ದೀರಾ? ಇಷ್ಟೇ ನಾನು ಕೇಳುವುದು. ಇನ್ನು ಎಷ್ಟು ಸರಳವಾಗಿ ಕೇಳಲಿ.

ಅಧ್ಯಕ್ಷರು:– ಅವರಿಗೆ ಅನರ್ಹತೆ ಆಗಿತ್ತು, . .

ಶ್ರೀ ವೈ.ಎಸ್.ವಿ. ದತ್ತ:– ಬಹಳ ಸರಳವಾಗಿದೆ ಹಾಗೂ ಸ್ಪಷ್ಟವಾಗಿದೆ.

ಅಧ್ಯಕ್ಷರು:– ಇನ್ನೊಂದು ಸಾರಿ study ಮಾಡಿ. That is better. It is a serious matter, you go through the matter. ಎಲ್ಲಾ study ಮಾಡಿ you come back.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಎಲ್ಲಾ Universities ಗೆ ಸನ್ಮಾನ್ಯ ರಾಜ್ಯಪಾಲರು Chancellor ಆಗಿರುತ್ತಾರೆ. ಇಲ್ಲಿ Deemed Universities ನಲ್ಲಿ ಛಾನ್ಸಲರ್ ಆಗಿರತಕ್ಕಂತಹವರು ಯಾರು? ಛಾನ್ಸಲರ್ ಆಗಿರುವವರಿಗೆ ಏನು qualification ಇರಬೇಕು? ಏನಿದ್ದರೆ ಆಗಬಾರದು ಎಂದು ಹೇಳಿ.

ಅಧ್ಯಕ್ಷರು:– ಆಮೇಲೆ ಹೇಳಿ. ಗಡಿಬಿಡಿಯಲ್ಲಿ ಹೇಳಬೇಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಈ ಪಾರ್ಟ್‌ನಲ್ಲಿ ಈ ಪ್ರಶ್ನೆ ಇಲ್ಲ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ದಯವಿಟ್ಟು ಈ ವಿಷಯವನ್ನು clarification ಮಾಡಲಿ. ಇಲ್ಲಿ confuse ಆಗುವುದು ಬೇಡ. Deemed Universities status ಅನ್ನು ಕೊಡುವಂಥದ್ದು ಕೇಂದ್ರ ಸರ್ಕಾರ. ಮಾನ್ಯ ರಮೇಶ್ ಕುಮಾರ್‌ರವರು ಕೇಳುತ್ತಿರುವುದು Whether the State Government has recommended all these things and ಮಧ್ಯದಲ್ಲಿ paper notification ಕೂಡ ಬಂದಿತು. ಇವರನ್ನೆಲ್ಲಾ ನಾವು black list ಮಾಡುತ್ತಿದ್ದೇವೆ, ಇವರು ಯಾರು ಕಾಲೇಜುಗಳನ್ನು ಸರಿಯಾಗಿ ನಡೆಸುತ್ತಿಲ್ಲ ಎನ್ನುವಂತಹ ಸಂಸ್ಥೆಗಳು ಇದರಲ್ಲಿ ಸೇರಿಕೊಂಡಿವೆ. ಅದಕ್ಕೋಸ್ಕರ State Government ಏನಾದರೂ ಮತ್ತೆ ರೆಕಮಂಡ್ ಮಾಡಿ ಅದನ್ನು Deemed Universities status ಕೊಡುತ್ತಾ ಎನ್ನುವಂತಹ ಪ್ರಶ್ನೆ ಉದ್ಭವವಾಗಿರುವುದರಿಂದ ರಾಜ್ಯ ಸರ್ಕಾರ ಏನು ಮಾಡಿದೆ ಎಂದು ಹೇಳಲಿ.

ಶ್ರೀ ವೈ.ಎಸ್.ವಿ. ದತ್ತ:– ಅದಕ್ಕಿಂತ ಮುಂಚೆ ಇವುಗಳನ್ನು Deemed Universities status ಕೊಡುವುದಕ್ಕೆ ನಿಮ್ಮ ಕಾಲದಲ್ಲಿ ರೆಕಮಂಡ್ ಆಗಿತ್ತಾ ಅಥವಾ ಯಾರ ಕಾಲದಲ್ಲಿ ರೆಕಮಂಡ್ ಆಗಿತ್ತು?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ನಮ್ಮ ಕಾಲದಲ್ಲಿ ನಾನು ಬಂದ ಮೇಲೆ ಯಾವುದೂ Deemed University ಗೆ ರೆಕಮಂಡ್ ಮಾಡಿಲ್ಲ.

ಅಧ್ಯಕ್ಷರು:– ನೀವು ಬಂದಾಗ ಮಾಡಿರಬಹುದು, ಹಿಂದೆ ಮಾಡಿರಬಹುದು, ಯಾರಾದರೂ ಮಾಡಿರಬಹುದು. Part of the State Government ಏನು ಎನ್ನುವುದನ್ನು ನೀವು ತಿಳಿದುಕೊಳ್ಳಿ. Go through the previous record, everything and come out with the answer. ಮಾನ್ಯ ರಮೇಶ್ ಕುಮಾರ್‌ರವರೇ ಹಾಗೆ ಮಾಡೋಣ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಕೆಲವು ಸಣ್ಣ ಸಣ್ಣ ಪ್ರಶ್ನೆಗಳು ಇವೆ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಬೆಳಗಾವಿಯ KLE ಸಂಸ್ಥೆಗೆ 2006ರಲ್ಲಿ status ಸಿಕ್ಕಿದೆ. ಅಂದರೆ ಮುಂಚೆ State Government recommend ಮಾಡಿರಬೇಕು. 2007ರಲ್ಲಿ JSS Mysore, 2009ರಲ್ಲಿ NITTE ಸಂಸ್ಥೆ, 1993ರಲ್ಲಿ ಮಣಿಪಾಲ್ ಸಂಸ್ಥೆ, 2009ರಲ್ಲಿ Yenepoya University, 2008ರಲ್ಲಿ BLDE, 2007ರಲ್ಲಿ ದೇವರಾಜ ಅರಸು ಸಂಸ್ಥೆ, ಸಿದ್ಧಾರ್ಥ ವಿಶ್ವವಿದ್ಯಾಲಯ 2008ರಲ್ಲಿ. ಅಂದರೆ ಇದಕ್ಕಿಂತ ಮುಂಚೆ ರಾಜ್ಯ ಸರ್ಕಾರದಿಂದ ರೆಕಮಂಡ್ ಆಗಿರಬೇಕು. ದಯವಿಟ್ಟು ಆ ಮಾಹಿತಿಯನ್ನು ಸದನಕ್ಕೆ ಕೊಡಿ. ಯಾವ ಸರ್ಕಾರ ಇತ್ತು ಎಂದು ಗೊತ್ತಾಗುತ್ತದೆ.

ಅಧ್ಯಕ್ಷರು:– Yes. It is a serious matter. Defer ಮಾಡೋಣ ಬಿಡಿ. ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಸಿ.ಟಿ. ರವಿ:– Deemed ಸ್ಥಾನಮಾನಕ್ಕೆ ಏಕೆ ಹೋದರು ಎನ್ನುವುದು ಕೂಡ ಇಲ್ಲಿ ಚರ್ಚೆಯಾಗಬೇಕಾದ ವಿಷಯ.

ಅಧ್ಯಕ್ಷರು:– ಅದು ಇಲ್ಲಿ ಬರುವುದಿಲ್ಲ.

ಶ್ರೀ ಸಿ.ಟಿ. ರವಿ:– Deemed ವಿಶ್ವವಿದ್ಯಾಲಯಗಳಲ್ಲಿ CET ಪಾಸಾದ ರಾಜ್ಯದ ವಿದ್ಯಾರ್ಥಿಗಳಿಗೆ ಎಷ್ಟು ಪರ್ಸೆಂಟ್ ಸೀಟ್ ಕೊಡುತ್ತಾರೆ?

ಅಧ್ಯಕ್ಷರು:– ಈಗ ಬೇಡ, ಆ ವಿಷಯಕ್ಕೆ ಆಮೇಲೆ ಬರೋಣ.

ಶ್ರೀ ಸಿ.ಟಿ. ರವಿ:– ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಎಷ್ಟು ಪರ್ಸೆಂಟ್ ಸೀಟ್ ಇವೆ,. . . ರಾಜ್ಯದ ಪಾಲು ಇಲ್ಲ.

ಅಧ್ಯಕ್ಷರು:– ಈಗ ಉತ್ತರ ಕೊಟ್ಟರೆ ಪೂರ್ತಿ ಹೇಳಬೇಕಾಗುತ್ತದೆ.

ಶ್ರೀ ಸಿ.ಟಿ. ರವಿ:– ಇಲ್ಲಿ ಯಾವ ಸಾಮಾಜಿಕ ನ್ಯಾಯ ಇದೆ? ಎಲ್ಲಾ ಸಾಮಾಜಿಕ ನ್ಯಾಯದ ಹರಿಕಾರರೇ ರಾಜ್ಯಭಾರ ಮಾಡಿರುವುದು.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ರವಿ ಅವರೇ ನೀವು ಮಾಡಿರುವುದು. ನಾವು ಮಾಡಿಲ್ಲ ನೀವು ಮಾಡಿರುವುದು.

ಶ್ರೀ ಸಿ.ಟಿ. ರವಿ:– ಖಂಡಿತ ತಿಳಿದುಕೊಳ್ಳಿ, ಡೀಮ್ಡ್ ವಿಶ್ವವಿದ್ಯಾನಿಲಯದ ಸ್ಥಾನಮಾನ ಕೊಟ್ಟಿದ್ದು ನಾವಲ್ಲ. BJP ಸರ್ಕಾರವೂ ಅಲ್ಲ. ಕಾಂಗ್ರೆಸ್ ಸರ್ಕಾರ ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನ ಮಾನ ಕೊಟ್ಟಿದ್ದು. ಇಡೀ ದೇಶದಲ್ಲಿ ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ಎಲ್ಲರಿಗೂ ಕೊಟ್ಟಿದ್ದು ಕಾಂಗ್ರೆಸ್ ಸರ್ಕಾರ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಮಾನ್ಯ ರವಿ ಅವರು ಸಚಿವರಾಗಿದ್ದಾಗ ಅವರೇ ಕೆಲವು ಕಾಲೇಜುಗಳಿಗೆ Deemed Universities status ಕೊಟ್ಟಿದ್ದಾರೆ.

ಶ್ರೀ ಸಿ.ಟಿ. ರವಿ:– Yes. ಖಾಸಗಿ ವಿಶ್ವವಿದ್ಯಾಲಯಗಳಿಗೆ ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ಕೊಟ್ಟಿದ್ದು ಈ ಸದನ.

ಅಧ್ಯಕ್ಷರು:– ಈ ಪ್ರಶ್ನೆಯನ್ನು ಮುಂದೂಡಿದೆ, ಇನ್ನೊಂದು ದಿನ ತೆಗೆದುಕೊಳ್ಳೋಣ. ಅವರು ತಯಾರಾಗಿ ಬರಲಿ.

ಶ್ರೀ ಸಿ.ಟಿ. ರವಿ:– ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಎಷ್ಟು ಪರ್ಸೆಂಟ್ ಸೀಟ್ ಕೊಟ್ಟಿದ್ದೀರಿ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:– 2008ರಲ್ಲಿ ಯಾರ ಸರ್ಕಾರ ಇತ್ತು? ಈ ವ್ಯವಹಾರವೆಲ್ಲಾ ನಿಮ್ಮ ಕಾಲದಲ್ಲಿ ಪ್ರಾರಂಭವಾಗಿದ್ದು.

(ಗೊಂದಲ)

ಶ್ರೀ ಸಿ.ಡಿ. ರವಿ:– ಇವತ್ತು ಅವರು ಇಲ್ಲ. ಹೇಳುವುದಕ್ಕೆ ನಾಚಿಕೆಯಾಗುತ್ತದೆ.

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ. ಈ ಪ್ರಶ್ನೆ ಮುಂದಕ್ಕೆ ಹಾಕಿದ್ದೇನೆ. ಆ ಮೇಲೆ ಮಾತನಾಡಿ.

(ಗೊಂದಲ)

ಶ್ರೀ ಸಿ.ಟಿ. ರವಿ:– ಈ ಸದನ ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ರದ್ದುಪಡಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ರೆಕಮಂಡ್ ಮಾಡಲಿ. ನಮ್ಮ ರಾಜ್ಯದ ಮಕ್ಕಳಿಗೆ ಅನ್ಯಾಯವಾಗುತ್ತಿದೆ, ಇಷ್ಟು ವರ್ಷಗಳ ಕಾಲ ಅನ್ಯಾಯವಾಗಿದೆ. ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ರದ್ದು ಮಾಡುವುದಕ್ಕೆ ಕೇಂದ್ರಕ್ಕೆ ರೆಕಮಂಡ್ ಮಾಡಲಿ.

(ಗೊಂದಲ)

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆ ಬೇಡಿಕೆ ಬಂದಾಗ ಎಲ್ಲಾ ವಿಷಯ ಚರ್ಚೆ ಮಾಡೋಣ. ನಾನು ಸಿದ್ಧನಾಗಿದ್ದೇನೆ. ಈ ರಾಜ್ಯದ ಮಕ್ಕಳ ಹಿತದೃಷ್ಟಿಯಿಂದ ಏನೇನು ಮಾಡಬೇಕು ಎಲ್ಲಕ್ಕೂ ಸಿದ್ಧನಾಗಿದ್ದೇನೆ. ನೀವು ಸಿದ್ಧರಾಗಿದ್ದೀರೋ ಇಲ್ಲವೋ ಎಂಬ ಬಗ್ಗೆ ತೀರ್ಮಾನ ಮಾಡಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ್ದನ್ನು ನಾವು ಸ್ವಾಗತಿಸುತ್ತೇವೆ. ಇವರು ನಾವು ಕೊಟ್ಟಿಲ್ಲವೆಂದು ಹೇಳುತ್ತಾರೆ, ಇವರು ನಾವು ಕೊಟ್ಟಿಲ್ಲವೆಂದು ಹೇಳುತ್ತಾರೆ. ನಮಗೆ ಊಟ ಯಾವುದು ಮತ್ತೊಂದು ಯಾವುದು ಎಂದು ಸದನಕ್ಕೆ ಗೊತ್ತಾಗಬೇಕು. ಇವರು ಊಟ ಮಾಡಿದ್ದೋ ಅವರು ಊಟ ಮಾಡಿದ್ದೋ ಯಾರು ಊಟ ಮಾಡಿದ್ದು ಎಂದು ಗೊತ್ತಾಗಬೇಕು.

ಅಧ್ಯಕ್ಷರು:– ನೀವು ಏನೂ ಗೊತ್ತಿಲ್ಲದವರು. ಏನೂ ಗೊತ್ತಿಲ್ಲ ಬಹಳ ಮುದ್ದು ಮಗು.

ಶ್ರೀ ಅವರಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ ಮಾನ್ಯ ರಮೇಶ್‌ಕುಮಾರ್‌ರವರು 'ಇ' ಮತ್ತು 'ಉ' ನಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದಾರೆ, ಇದು ಮಕ್ಕಳಿಗೆ ಅನಾನುಕೂಲವಾಗುತ್ತಿರುವುದು ಮತ್ತು ಜನರಿಗೆ

ತೊಂದರೆಯಾಗುತ್ತಿರುವ ಬಗ್ಗೆ ಇದೆ. ಅವರು fees structure ಬಗ್ಗೆ ಕೇಳಿದ್ದಾರೆ. ದಯವಿಟ್ಟು ಅದರ ಬಗ್ಗೆ ಸದನಕ್ಕೆ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು:– ಅದರ ಬಗ್ಗೆಯೇ study ಮಾಡಿಕೊಂಡು ಬನ್ನಿ ಎಂದು ಹೇಳಿದ್ದೇನೆ.

ಶ್ರೀ ಅರವಿಂದ ಲಿಂಬಾವಳಿ:– ನಾನು ಹೇಳುತ್ತಿರುವುದು fees structure ಬಗ್ಗೆ. ನಮ್ಮ Government College ನಲ್ಲಿ ಖಾಸಗಿ ಕಾಲೇಜಿನಲ್ಲಿರುವ fees structure ಬಗ್ಗೆ ಅವರು ಪ್ರಶ್ನೆಯನ್ನು ಹಾಕಿದ್ದಾರೆ. ದಯವಿಟ್ಟು ಅದರ ಬಗ್ಗೆ ಇಲ್ಲಿ ಚರ್ಚೆಯಾದರೆ ಒಳ್ಳೆಯದು ಮತ್ತು ಅದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು:– ನಾನು ಈಗಾಗಲೇ ಅವರಿಗೆ ಹೇಳಿದ್ದೇನೆ. ಇವುಗಳ ಬಗ್ಗೆಯೆಲ್ಲಾ ಸಂಪೂರ್ಣವಾಗಿ study ಮಾಡಿಕೊಂಡು ಬನ್ನಿ. ಅದರ ಬಗ್ಗೆ ಚರ್ಚೆಯನ್ನು ಬೇಕಾದರೆ ಮಾಡೋಣ. ಏಕೆಂದರೆ ಅದು ಒಳ್ಳೆಯ ವಿಷಯವೇ ಆಗಿದೆ. ಈಗ ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, , , ,

ಅಧ್ಯಕ್ಷರು:– ರಮೇಶ್‌ಕುಮಾರ್ ಸಾಕು. ಈಗ ಇದನ್ನು ಇಲ್ಲಿಗೆ ನಿಲ್ಲಿಸೋಣ. ತಾವು ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ತಾವು ಹೀಗೆ ಹೇಳಿಬಿಟ್ಟರೆ ಹೇಗೆ? ನಾನಿನ್ನು supplementary question ಅನ್ನೇ ಇನ್ನೂ ಕೇಳಿಲ್ಲ. ಇವರೆಲ್ಲರೂ ಗದ್ದಲ ಮಾಡಿಬಿಟ್ಟರು. ಅವರಿಬ್ಬರೂ ಅಂಗಡಿ ಇಟ್ಟುಕೊಂಡಿರುವವರು. ನಾನು ಆ ಎರಡೂ ಅಂಗಡಿಯಲ್ಲಿ ನಾನಿಲ್ಲ.

ಅಧ್ಯಕ್ಷರು:– ಈಗ ಈ ವಿಚಾರವನ್ನು ಇನ್ನೊಂದು ದಿವಸ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಅದು ಹಾಗಲ್ಲ ಅಧ್ಯಕ್ಷರೆ, ತಾವು ಸ್ವಲ್ಪ ದೊಡ್ಡ ಮನಸ್ಸು ಮಾಡಬೇಕು. ಮಾನ್ಯ ಮಂತ್ರಿಗಳೆ, ತಾವು ಛಾನ್ಸಲರ್

ವಿಚಾರಕ್ಕೆ ಹೇಳಿದಿರಿ, ಅದರ ಬಗ್ಗೆ ಪ್ರಶ್ನೆಯಲ್ಲಿ ಕೇಳಿಲ್ಲವೆಂದಿರಿ. ಒಂದು ಪ್ರಶ್ನೆಯನ್ನು ನಾವು ಕೇಳಿದಾಗ ಅದಕ್ಕೆ ಸಂಬಂಧವೇ ಇಲ್ಲದಂಥದ್ದನ್ನು ನಾವು ಕೇಳಿದರೆ ಅದಕ್ಕೆ ತಾವು ನೋಟಿಸ್ ಕೇಳಬೇಕು. Related ಇದ್ದರೆ ನೀವು comprehend ಮಾಡಬೇಕು, ಏನೆನೆಲ್ಲಾ ಉಪ ಪ್ರಶ್ನೆಗಳನ್ನು ಕೇಳಬಹುದೆಂದು. ಈಗ ಆಯಿತು, ಛಾನ್ಸಲರ್ ವಿಚಾರಕ್ಕೆ ಸಂಬಂಧಪಟ್ಟಂತೆ ಈಗ ನಿಮ್ಮ ಹತ್ತಿರ ಮಾಹಿತಿಯಿಲ್ಲ, ನಾನು ಆ ಬಗ್ಗೆ ಪ್ರಶ್ನೆಯನ್ನು ಕೇಳಿಲ್ಲವೆಂದಿಟ್ಟುಕೊಳ್ಳೋಣ. ಎರಡನೆಯ ಪ್ರಶ್ನೆಯನ್ನು ಕೇಳುತ್ತೇನೆ, ಅವರು ಉದ್ಯೋಗಕ್ಕೆ ಜನರನ್ನು ತೆಗೆದುಕೊಳ್ಳುತ್ತಾರಲ್ಲ, ಆ ವಿಚಾರದಲ್ಲಿ ಸರ್ಕಾರ ಮಧ್ಯ ಪ್ರವೇಶ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೆ? Deemed University ಯವರು, , ,

ಅಧ್ಯಕ್ಷರು:– ಈಗ ನಾನು ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಹೇಳಿ ಸಾರ್.

ಅಧ್ಯಕ್ಷರು:– ಈಗ ಮಾನ್ಯ ಸಚಿವರು ಅದರ ಬಗ್ಗೆ... he has not gone into the question. Halfhearted ಆಗಿ ಚರ್ಚೆ ಮಾಡುವುದು ಬೇಡ. ಒಂದು ದಿವಸ ಚರ್ಚೆಗೆ ಇಟ್ಟುಕೊಳ್ಳೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– Correct sir, ನೀವು ನನಗೆ ಸಹಾಯ ಮಾಡುತ್ತಿದ್ದೀರಿ. ನಿಮ್ಮ ಉದ್ದೇಶ ನನಗರ್ಥವಾಯಿತು. ಅವರಿಗಿಂತಲೂ ಹೆಚ್ಚಾಗಿ ಈಗ ನಿಮಗೆ ನಾನು ರಿಪ್ಲೈ ಕೊಡಬೇಕಾಗಿರುವಂಥದ್ದು. ಇದು ದೊಡ್ಡ ಮಾಫಿಯಾ ಆಗಿದೆ. ಅದನ್ನೆಲ್ಲಾ ಹೊರಗೆ ತೆಗೆಯಬೇಕೆಂದೇ ನಿಮ್ಮ ತೀರ್ಮಾನವಾಗಿದೆ. ಈಗ ನಿಮ್ಮ ಕೆಲಸವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇದನೆಲ್ಲಾ ಹೊರಗೆ ತೆಗೆಯಲು ಒಂದು ಸದನ ಸಮಿತಿಯನ್ನು ಮಾಡಿಬಿಡಿ. ದಯಮಾಡಿ ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಲಿ.

ಶ್ರೀ ವೈ.ಎಸ್.ವಿ. ದತ್ತ:– ಯಾರ ಕಾಲದಲ್ಲಿ ಅನುಮತಿ ಕೊಟ್ಟರು, ಹೇಗೆ ಕೊಟ್ಟರು, ಈ ಅಕ್ರಮ ಸಂತಾನ ಹೇಗೆ ಹುಟ್ಟಿತು, ಇವೆಲ್ಲವೂ ಹೊರಗೆ ಬರಲಿ.

ಅಧ್ಯಕ್ಷರು:– ರಮೇಶ್‌ಕುಮಾರ್, ಈಗಲೇ dispose ಮಾಡೋಣವೆಂದು ಹೇಳುತ್ತೀರಾ ಅಥವಾ, , ,

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಹಾಗಲ್ಲ, ನಾನು ಏನು ಹೇಳುತ್ತೇನೆಂದರೆ, ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗುವುದಕ್ಕೆ ನನ್ನ ಆಕ್ಷೇಪಣೆಯೇನೂ ಇಲ್ಲ. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಮಾಧ್ಯಮಗಳವರು ಸದನದಲ್ಲಿ ಹಾಜರಿರುತ್ತಾರೆ. ಸಾರ್ವಜನಿಕರಿಗೆ ಒಂದು ವಿಷಯವಾದರೂ ಹೋಗಲಿ.

ಅಧ್ಯಕ್ಷರು:– ಅದಕ್ಕಾಗಿಯೇ ಈ ವಿಚಾರವನ್ನು ಇನ್ನೊಂದು ದಿವಸ ಚರ್ಚೆಗೆ ತೆಗೆದುಕೊಳ್ಳೋಣವೆಂದು ನಾನು ಹೇಳುತ್ತಿರುವುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೆ, ತಾವು ಯಾವ ದಿನಾಂಕವೆಂದು ನಿಗದಿಪಡಿಸಿ. ಆ ದಿನ ಇದರ ಬಗ್ಗೆ ಚರ್ಚೆಯಾಗಲಿ.

ಅಧ್ಯಕ್ಷರು:– ಓ.ಕೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆಯನ್ನು ನಾನು ಒಪ್ಪಿಕೊಂಡಿದ್ದೇನೆ. ತಾವು ನನ್ನ ನೆರವಿಗೆ ಬಂದಿದ್ದಕ್ಕಾಗಿ ತಮಗೆ ಧನ್ಯವಾದಗಳು.